# ಕರ್ನಾಟಕ ಸರ್ಕಾರ

ಸಂ:ಆಇ 24 ಟಿಎಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:17.11.2021.

## ಸುತ್ತೋಲೆ

**ವಿಷಯ:**-ಸರ್ಕಾರದ ಅಧೀನದಲ್ಲಿರುವ ನಿಗಮ / ಮಂಡಳಿ / ನಿಯಮಿತ /ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು HRMS ನಲ್ಲಿ ಅಳವಡಿಸಿ ವೇತನಗಳನ್ನು ಸೆಳೆಯುವ ಬಗ್ಗೆ.

****-****

ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 24 ಟಿಎಆರ್ 2020, ದಿನಾಂಕ:02.08.2021 ರಲ್ಲಿ ಸರ್ಕಾರದಿಂದ ವೇತನ ಸಹಾಯಾನುದಾನ ಪಡೆಯುವ ಎಲ್ಲಾ ನಿಗಮ/ಮಂಡಳಿ/ ನಿಯಮಿತ/ ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳು ಆಗಸ್ಟ್ 2021 ರವರೆಗೆ ವೇತನಗಳನ್ನು ಹಿಂದಿನಂತೆಯೇ ಸೆಳೆಯಲು ಕಾಲಾವಕಾಶ ನೀಡಲಾಗಿತ್ತು.

ವೇತನ ಸಹಾಯಾನುದಾನ ಪಡೆಯುವ ಸಾಕಷ್ಟು ಸಂಸ್ಥೆಗಳು ತನ್ನ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು HRMS ನಲ್ಲಿ ಧಾಖಲಿಸಿದ್ದು, ಬಿಲ್ಲು ತಯಾರಿಸುವಾಗ HRMS ತಂತ್ರಾಂಶದಲ್ಲಿ ತಾಂತ್ರಿಕ ತೊಂದರೆಗಳಿಂದ ಬಿಲ್ಲು ತಯಾರಿಸಲು ಸಾಧ್ಯವಾಗುತ್ತಿಲ್ಲವೆಂದು ತಂತ್ರಾಂಶದಲ್ಲಿ ತಿದ್ದುಪಡಿ ಮಾಡಿ ಸರಿಪಡಿಸಲು ಕಾಲಾವಕಾಶ ಬೇಕಾಗಿರುವ ಹಿನ್ನೆಲೆಯಲ್ಲಿ ಹಿಂದಿನ ಪದ್ಧತಿಯಂತೆ ತಮ್ಮ ಸಿಬ್ಬಂದಿಗಳ ವೇತನ ಸೆಳೆಯಲು ಅನುಮತಿ ನೀಡುವಂತೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಆದ್ದರಿಂದ, ಸರ್ಕಾರದಿಂದ ವೇತನ ಸಹಾಯಾನುದಾನ ಪಡೆಯುತ್ತಿರುವ ಎಲ್ಲಾ ನಿಗಮ/ಮಂಡಳಿ/ ನಿಯಮಿತ/ ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳು **ನವೆಂಬರ್ 2021 ರೊಳಗಾಗಿ** ಕಡ್ಡಾಯವಾಗಿ HRMS ನಲ್ಲಿ ಸಿಬ್ಬಂದಿ ವಿವರಗಳನ್ನು ದಾಖಲಿಸುವಂತೆ ಹಾಗೂ ಸುತ್ತೋಲೆ ಸಂ:ಆಇ 24 ಟಿಎಆರ್ 2020, ದಿ:26.10.2021 ರಂತೆ ಖಜಾನೆಯಿಂದ ಕೂಡಲೇ GIA Code ಪಡೆಯುವಂತೆ ಸೂಚಿಸಲಾಗಿದೆ. **ಅಕ್ಟೋಬರ್ 2021 ರವರೆಗೆ ವೇತನಗಳನ್ನು ಹಿಂದಿನಂತೆಯೇ ಸೆಳೆಯಲು ಕಾಲಾವಕಾಶ ನೀಡಲಾಗಿದೆ. ನವೆಂಬರ್ 2021 ರಿಂದ ಮಾಸಿಕ ವೇತನವನ್ನು** ಕಡ್ಡಾಯವಾಗಿ HRMS ಮೂಲಕ ಪಡೆಯಲು ಸೂಚಿಸಿದೆ.

KMDC LTD.
Head Office Bangalore
03 DEC 2021
No.

17.11.2021

**(ಹೆಚ್.ಎ. ಶೋಭ)**
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

3/12

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ವಿಶೇಷ ಕಾರ್ಯದರ್ಶಿಗಳು/ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ನಿಗಮ/ಮಂಡಳಿ/ನಿಯಮಿತ/ವಿಶ್ವವಿದ್ಯಾಲಯಗಳು/ಸಂಘ ಸೊಸೈಟಿಗಳು.
9. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು.
10. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
11. ಉಪ ನಿರ್ದೇಶಕರು, ಟಿಎನ್‌ಎಂಸಿ ಖನಿಜ ಭವನ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.